KATK900005432019

# 5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ತಿಪಟೂರು

**ಎಸ್.ಸಿ.ಸಂಖ್ಯೆ: 10039/2019**

**ಪ್ರಮಾಣೀಕರಿಸಿದ ದಿನಾಂಕ: 10.02.2026**

**ಚಾ.ಸಾ–28**

**ಫ್ರಾ.ಸಾ–24**

| | |
|---|---|
| ಹೆಸರು | ಮೊಹಮ್ಮದ್ ಸಲೀಂ. ಬಿ |
| ತಂದೆ ಹೆಸರು | ಲೇಟ್ ಬುಡೇನ್ ಸಾಬ್ |
| ವಯಸ್ಸು | 46 ವರ್ಷ |
| ಉದ್ಯೋಗ | ಪೋಲಿಸ್ ಇನ್ಸ್ ಪೆಕ್ಟರ್, ಲೋಕಾಯುಕ್ತ ಪೊಲೀಸ್ ಠಾಣೆ, ತುಮಕೂರು. |
| ವಾಸಸ್ಥಳ | ತುಮಕೂರು |

**ಮುಖ್ಯವಿಚಾರಣೆ, ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ದಿ: 01.10.2018 ರಿಂದ ದಿ: 19.08.2019 ರವರೆಗೂ ತುರುವೇಕೆರೆ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

ದಿ: 20.02.2019 ರಂದು ಈ ಪ್ರಕರಣದ ಕಡತವನ್ನು ತುರುವೇಕರೆ ಠಾಣಾ ಪಿ.ಎಸ್.ಐ ಚಾಸಾ–27 ರವರಿಂದ ಪಡೆದುಕೊಂಡಿರುತ್ತೇನೆ. ಈ ಪ್ರಕರಣದಲ್ಲಿ ಆರೋಪಿ ಪತ್ತೆಗಾಗಿ ಠಾಣಾ ಸಿಬ್ಬಂದಿಯೊಳಗೆ ಬೇರೆ ಬೇರೆ ತಂಡ ಮಾಡಿ ಪ್ರಯತ್ನಿಸುತ್ತಿದ್ದು, ಅದರಂತೆ ದಿ: 01.03.2019 ರಂದು ಆರೋಪಿ ಪತ್ತೆಗಾಗಿ

ನೇಮವಾಗಿದ್ದ ಸಿಬ್ಬಂದಿಯವರಾದ ಸಿ.ಪಿ.ಸಿ–269 ಹಾಗೂ ಸಿ.ಪಿ.ಸಿ–111 ರವರು ಈ ಪ್ರಕರಣದಲ್ಲಿ ಗುಮಾನಿ ಆಸಾಮಿಯಾದ ಗೋವಿಂದರಾಜು @ ಕತ್ತೆರಾಜು @ ರಾಜ ರವರನ್ನು ಬೆಳಗ್ಗೆ 7.00 ಗಂಟೆಗೆ ತಂಡಗ ಗ್ರಾಮದಲ್ಲಿ ವಶಕ್ಕೆ ಪಡೆದು ಬೆಳಗ್ಗೆ 8.00 ಗಂಟೆಗೆ ನನ್ನ ಮುಂದೆ ವರದಿಯೊಂದಿಗೆ ಹಾಜರುಪಡಿಸಿದ್ದು, ಸದರಿ ವರದಿಯಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ವರದಿ ಈಗಾಗಲೇ ನಿ.ಪಿ–19 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ–19(ಬಿ) ಎಂದು ಗುರುತಿಸಲಾಯಿತು.

ನಾನು ಗುಮಾನಿ ಆಸಾಮಿಯನ್ನು ತೀವ್ರ ವಿಚಾರಣೆಗೆ ಒಳಪಡಿಸಿದಾಗ ಆರೋಪಿಯು ತಾನೇ ಕೊಲೆ ಮಾಡಿದ್ದು ಎಂದು ಒಪ್ಪಿಕೊಂಡಿದ್ದು, ಅದರಂತೆ ಆರೋಪಿಯನ್ನು ದಸ್ತಗಿರಿ ನಿಯಮವನ್ನು ಜರುಗಿಸಿ, ಅಭಿರಕ್ಷೆಯ ನಡವಳಿಯನ್ನು ಅನುಸರಿಸಿ ಆರೋಪಿಯ ಸ್ವಇಚ್ಚಾ ಹೇಳಿಕೆಯನ್ನು ಪಡೆದಿದ್ದು, ಅದಕ್ಕೆ ಆರೋಪಿಯ ಸಹಿಯನ್ನು ಪಡೆದು ನಾನು ಸಹಃ ಸಹಿ ಮಾಡಿರುತ್ತೇನೆ. ಸದರಿ ಆರೋಪಿತನು ಸ್ವ ಇಚ್ಚಾ ಹೇಳಿಕೆಯಲ್ಲಿ ನನ್ನ ಜೊತೆಯಲ್ಲಿ ಬಂದರೆ ಸುರೇಶ್ ನಿಗೆ ಹೊಡೆದು ಕೊಲೆ ಮಾಡಲು ಉಪಯೋಗಿಸಿ ಎಸದಿರುವ ರೀಫಿಸ್ ದೊಣ್ಣೆಯನ್ನು ಹಾಗೂ ರಕ್ತವಾಗಿರುವ ನನ್ನ ಅಂಗಿ ಮತ್ತು ಚಡ್ಡಿಯನ್ನು ಹಾಜರು ಪಡಿಸುತ್ತೇನೆ ಎಂದು ಸ್ವಇಚ್ಚಾ ಹೇಳಿಕೆಯನ್ನು ನೀಡಿರುತ್ತಾನೆ.

ಸದರಿ ಸ್ವಇಚ್ಚಾ ಹೇಳಿಕೆಯನ್ನು **ನಿ.ಪಿ–27** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ–27(ಎ) ಎಂದು ಹಾಗೂ ಆರೋಪಿಯ ಸಹಿಯನ್ನು ನಿ.ಪಿ–27(ಬಿ) ಎಂದು ಗುರುತಿಸಲಾಯಿತು.

ಆರೋಪಿತನು ಹೇಳಿದಂತೆ ಮರದ ರೀಫಿಸ್ ಅನ್ನು ಹಾಗೂ ಬಟ್ಟೆಗಳನ್ನು ವಶಪಡಿಸಿಕೊಳ್ಳಲು ಪಂಚನಾಮೆಯನ್ನು ಜರುಗಿಸುವ ಸಂಬಂಧ ತಂಡಗ ಗ್ರಾಮದ ಪಟ್ಟಣ ಪಂಚಾಯತಿ ಯವರಿಗೆ ಮನವಿಯನ್ನು ಸಲ್ಲಿಸಿರುತ್ತೇನೆ. ಅದರಂತೆ ಪಂಚರಾದ ಚಾಸಾ-11 ಮತ್ತು 12 ರವರನ್ನು ನೇಮಕ ಮಾಡಿರುತ್ತಾರೆ. ಸದರಿ ಚಾಸಾ-11 ಮತ್ತು 12 ರವರನ್ನು ಬೆಳಗ್ಗೆ 11.30 ಗಂಟೆಗೆ ಬರಮಾಡಿಕೊಂಡಿರುತ್ತೇನೆ. ಪಂಚರಿಗೆ ಪ್ರಕರಣದ ಬಗ್ಗೆ ಸಂಕ್ಷಿಪ್ತ ವಿವರಗಳನ್ನು ತಿಳಿಸಿ, ನಮ್ಮ ವಶದಲ್ಲಿದ್ದ ಆರೋಪಿಯನ್ನು ಪರಿಚಯಿಸಿ, ಆರೋಪಿ ತೋರಿಸಿದ ಸ್ಥಳದಲ್ಲಿ ಹೋಗಿ ಪಂಚನಾಮೆಯನ್ನು ಜರುಗಿಸಲು ಸಹಕರಿಸಬೇಕೆಂದು ಕೋರಿದ್ದು, ಅದರಂತೆ ಪಂಚರು ಒಪ್ಪಿದ್ದು ನಾನು ಮತ್ತು ಪಂಚರು ಹಾಗೂ ಆರೋಪಿ ಮತ್ತು ಸಿಬ್ಬಂದಿಯೊಂದಿಗೆ ನನ್ನ ಇಲಾಖಾ ವಾಹನವಾದ KA-06-G-455 ರಲ್ಲಿ 12.15 ಗಂಟೆಗೆ ಕಛೇರಿಯನ್ನು ಬಿಟ್ಟು 12.50 ಗಂಟೆಗೆ ತಂಡಗ ಗ್ರಾಮಕ್ಕೆ ತಲುಪಿದ್ದು, ಗ್ರಾಮದ ಪ್ರವೇಶದಲ್ಲಿಯೇ ನಮ್ಮ ವಾಹನವನ್ನು ನಿಲ್ಲಿಸಿ ಆರೋಪಿಯವರನ್ನು ಕೃತ್ಯಕ್ಕೆ ಉಪಯೋಗಿಸಿದ ರೀಫಿಸ್ ಮತ್ತು ರಕ್ತಸಿಕ್ತ ಬಟ್ಟೆ ಇರುವ ಸ್ಥಳಕ್ಕೆ ಕರೆದುಕೊಂಡು ಹೋಗಲು ತಿಳಿಸಿದ್ದು, ಅದರಂತೆ ಆರೋಪಿಯು ಮುಂದೆ ಮುಂದೆ ಹೋಗುತ್ತಿದ್ದು, ನಾವು, ಪಂಚರು ಮತ್ತು ಸಿಬ್ಬಂದಿ ಆತನನ್ನು ಹಿಂಬಾಲಿಸಿದ್ದು ಆರೋಪಿಯು ಗ್ರಾಮದ ರಾಮ ಮಂದಿರದ ಪಕ್ಕದಲ್ಲಿರುವ ರೋಜರ್ ಬಳ್ಳಿಯ ಪೊದೆಯಲ್ಲಿ ಅವಿತು ಇಟ್ಟಿದ್ದ ಒಂದು ಮರದ ರೀಫಿಸ್ ಅನ್ನು ಹೊರ ತೆಗೆದು ತೋರಿಸಿದ್ದು, ಅದನ್ನು ಪರಿಶೀಲಿಸಿ ನೋಡಲಾಗಿ ಸುಮಾರು 3 ಅಡಿಯ ಒಳಹಿಡಿ ಗಾತ್ರದ ಮರದ ರೀಫಿಸ್ ಆಗಿದ್ದು ಅದಕ್ಕೆ ಒಂದು ಕಡೆ ರಕ್ತವು ಅಂಟಿರುವ ಕುರುಹುಗಳು ಇದ್ದು, ಅದರಲ್ಲಿ 6 ಕಬ್ಬಿಣ ಮೊಳೆಗಳನ್ನು ಹೊಡೆದಿರುತ್ತದೆ. ಇದನ್ನು

ಮುಂದಿನ ತನಿಖೆ ಹಾಗೂ ವಿಧಿ ವಿಜ್ಞಾನ ಪ್ರಯೋಗ ಶಾಲೆಗೆ ಪರೀಕ್ಷೆಗಾಗಿ ಕಳುಹಿಸಲು ಒಂದು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಭದ್ರ ಪಡಿಸಿ ಇಂಗ್ಲೀಷ್ ನ ಹೆಚ್ ಎಂಬ ಅಕ್ಷರದಿಂದ ಸೀಲ್ ಮಾಡಿರುತ್ತೇನೆ.

ತದನಂತರ ಆರೋಪಿಯು ತನ್ನ ಮನೆಯ ಕಡೆ ಕರೆದುಕೊಂಡು ಹೋಗಿ ಮನೆಯ ಮುಂದೆ ಇರುವ ಪ್ಲಾಸ್ಟಿಕ್ ಡ್ರಮ್ ನ ಪಕ್ಕದಲ್ಲಿ ಬಚ್ಚಿಟ್ಟಿದ್ದ ರಕ್ತಸಿಕ್ತ ಬಟ್ಟೆಗಳನ್ನು ಹೊರತೆಗೆದು ಹಾಜರುಪಡಿಸಿದ್ದು, ಅದನ್ನು ಪರಿಶೀಲಿಸಲಾಗಿ ಒಂದು ಕಪ್ಪು ಬಣ್ಣದ ಬಿಳಿ ಗೆರೆಗಳುಳ್ಳ ಅರ್ಧ ತೋಳಿನ ಶರ್ಟ್ ಆಗಿದ್ದು ಅದಕ್ಕೆ ಮುಂಭಾಗ ಹಾಗೂ ಬಲಭಾಗ ಅಲ್ಲಲ್ಲಿ ರಕ್ತದ ಕಲೆಗಳಿದ್ದು, ಅದನ್ನು ಮುಂದಿನ ತನಿಖೆಗಾಗಿ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಈ ಶರ್ಟನ್ನು ಆರೋಪಿಯು ಕೃತ್ಯವೆಸಗುವ ಸಮಯದಲ್ಲಿ ಧರಿಸಿದ್ದು ಅದಕ್ಕೆ ರಕ್ತವಾಗಿರುವುದರಿಂದ ಬಚ್ಚಿಟ್ಟಿದ್ದಾಗಿ ಹೇಳಿರುತ್ತಾರೆ. ಅದರಂತೆ ಕೃತ್ಯ ಎಸಗುವ ಸಮಯದಲ್ಲಿ ತಾನು ಧರಿಸಿದ್ದ ಒಂದು ಡಿಮ್ ಗ್ರೇ ಬಣ್ಣದ ಪ್ಯಾಂಟ್ ಪೀಸ್ ನ ನಿಕ್ಕರ್ ಆಗಿದ್ದು ಅದಕ್ಕೂ ಸಹಃ ಮುಂಭಾಗದ ರಕ್ತದ ಕುರುಹುಗಳಿದ್ದು, ಇವೆರಡನ್ನು ಮುಂದಿನ ತನಿಖೆಗಾಗಿ ಹಾಗೂ ವಿಧಿ ವಿಜ್ಞಾನ ಪ್ರಯೋಗ ಶಾಲೆಗೆ ಕಳುಹಿಸಲು ಪ್ರತ್ಯೇಕವಾಗಿ ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಭದ್ರ ಪಡಿಸಿ ಇಂಗ್ಲೀಷ್ ನ ಹೆಚ್ ಎಂಬ ಅಕ್ಷರದಿಂದ ಸೀಲ್ ಮಾಡಿರುತ್ತೇನೆ. ಈ ಕಾಲದಲ್ಲಿ ವಿವರವಾದ ಪಂಚನಾಮೆಯನ್ನು ಜರುಗಿಸಿದ್ದು, ಇದಕ್ಕೆ ಪಂಚರು, ಆರೋಪಿ ಹಾಗೂ ನಾನು ಕೂಡ ಸಹಿ ಮಾಡಿರುತ್ತೇನೆ. ಸದರಿ ಪಂಚನಾಮೆಯಲ್ಲಿ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯು ಈಗಾಗಲೇ ನಿ.ಪಿ–11 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ–11(ಬಿ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ನ್ಯಾಯಾಲಯದ ಕಾಲವಕಾಶ ಮುಗಿದಿದ್ದು, ಮುಂದಿನ ಮುಖ್ಯ ವಿಚಾರಣೆಯನ್ನು ಮಧ್ಯಾಹ್ನ 2.45 ಗಂಟೆಗೆ ಮುಂದೂಡಲಾಯಿತು.)**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).**

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಹೇಮಂತ್ ಕುಮಾರ್ ಸಿ.ಆರ್)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ತಿಪಟೂರು**

**ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಮುಖ್ಯವಿಚಾರಣೆ, ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಸದರಿ ನಿ.ಪಿ-11 ರಲ್ಲಿ ಅಮಾನತ್ತು ಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ರೀಫಿಸ್ ಪಟ್ಟೆಯನ್ನು ನೋಡಿ ಗುರುತಿಸಿದ್ದು, ಅದು ಈಗಾಗಲೇ ಮುದ್ದೆಮಾಲು-7 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಒಂದು ಶರ್ಟನ್ನು ನೋಡಿ ಗುರುತಿಸಿದ್ದು, ಅದು ಈಗಾಗಲೇ ಮುದ್ದೆಮಾಲು-8 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಒಂದು ನಿಕ್ಕರ್ ಅನ್ನು ನೋಡಿ ಗುರುತಿಸಿದ್ದು, ಅದು ಈಗಾಗಲೇ ಮುದ್ದೆಮಾಲು-9 ಎಂದು ಗುರುತಿಸಲಾಗಿರುತ್ತದೆ. ಸದರಿ ಮುದ್ದೆಮಾಲು-7 ರಿಂದ 9 ರ ಮೇಲೆ ಅಂಟಿಸಿರುವ ಚೀಟಿಗಳ ಮೇಲೆ ಸಾಕ್ಷಿಯು ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ.

ಸದರಿ ಪಂಚನಾಮೆಯ ಅಡಿಯಲ್ಲಿ ಅಮಾನತ್ತು ಪಡಿಸಿಕೊಂಡ ವಸ್ತುಗಳನ್ನು ಠಾಣಾ ಪಿ.ಎಫ್ ನಂ.16/2019 ರಲ್ಲಿ ನೊಂದಾಯಿಸಿಕೊಂಡು, ಸದರಿ ವಸ್ತುಗಳನ್ನು FSL ಗೆ ಕಳುಹಿಸಲು ನ್ಯಾಯಾಲಯದ ಅನುಮತಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ಪಿ.ಎಫ್ ಅಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪಿ.ಎಫ್ ಅನ್ನು **ನಿ.ಪಿ-28** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-28(ಎ) ಎಂದು ಗುರುತಿಸಲಾಯಿತು. ನಂತರ ಆರೋಪಿ ಗೋವಿಂದರಾಜು ರವರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಸೂಕ್ತ ಬೆಂಗಾವಲಿನಲ್ಲಿ ಘನ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಘನ ನ್ಯಾಯಾಲಯವೂ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಿರುತ್ತದೆ. ನಂತರ ಈ ಪ್ರಕರಣದ ಮೃತನ ಹೆಂಡತಿಯಾದ ಶ್ರೀಮತಿ ಸುಮಾ ಹಾಗೂ ಮಗನಾದ ಗಂಜೇಂದ್ರ ಹಾಗೂ ಹೊನ್ನಪ್ಪ ರವರನ್ನು ವಿಚಾರಣೆ ಮಾಡಿ ಅವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

ದಿಃ 02.03.2019 ರಂದು ಈ ಪ್ರಕರಣದ ತನಿಖೆಯನ್ನು ಮುಂದುವರೆಸಿ ಕೃತ್ಯ ಸ್ಥಳದ ನಕ್ಷೆಯನ್ನು ತಯಾರಿಸಿ ಕೊಡುವಂತೆ ತುರುವೇಕೆರೆ ಲೋಕೋಪಯೋಗಿ ಇಲಾಖೆಗೆ ಮನವಿಯನ್ನು ಸಲ್ಲಿಸಿರುತ್ತೇನೆ. ನಂತರ ದಿಃ 09.03.2019 ರಂದು ಈ ಪ್ರಕರಣದ ತನಿಖೆಯನ್ನು ಮುಂದುವರೆಸಿ ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡಿರುವ ವಸ್ತುಗಳಾದ ರಕ್ತವಾಗಿರುವ ಮಣ್ಣು, ರಕ್ತವಾಗಿಲ್ಲದ ಮಣ್ಣು, ಶವ ತನಿಖಾ ಕಾಲದಲ್ಲಿ ಮೃತ ದೇಹದ ಮೇಲಿದ್ದ ಬಟ್ಟೆಯನ್ನು ವೈದ್ಯರು ತೆಗೆದು ಕಳುಹಿಸಿದ ಒಂದು ನೀಲಿ ಬಣ್ಣದ ಕಲೆಯಾಗಿರುವ ಜರ್ಕೀನ್, ಒಂದು ಬಿಳಿ ಬಣ್ಣದ ರಕ್ತದ ಕಲೆಯಾಗಿರುವ ಅಂಗಿ, ಒಂದು ಮಾಸಲು ಬಣ್ಣದ ರಕ್ತದ ಕಲೆಯಾಗಿರುವ

ಹರಿದಿರುವ ಪ್ಯಾಂಟ್, ಒಂದು ಖಾಕಿ ಬಣ್ಣದ ಹರಿದಿರುವ ನಿಕ್ಕರ್ ಹಾಗೂ ಆರೋಪಿಯಿಂದ ವಶಪಡಿಸಿಕೊಂಡಿದ್ದ ಒಂದು ಕಪ್ಪು ಬಣ್ಣದ ಬಿಳಿ ಗೆರೆಗಳುಳ್ಳ ಅರ್ಧ ತೋಳಿನ ಶರ್ಟ್, ಒಂದು ಡಿಮ್ ಗ್ರೇ ಬಣ್ಣದ ರಕ್ತದ ಕಲೆಯಾಗಿರುವ ಪ್ಯಾಂಟ್ ಪೀಸಿನ ನಿಕ್ಕರ್, ಒಂದು ಮರದ ರೀಪಿಸ್ ದೊಣ್ಣೆಯನ್ನು ಠಾಣಾ ಪಿ.ಸಿ-1041 ರವರ ಮುಖಾಂತರ ದಾವಣಗೆರೆ, FSL ಗೆ ಕಳುಹಿಸಿ ಕೊಟ್ಟಿರುತ್ತೇನೆ ಹಾಗೂ ಠಾಣಾ ಸಿ.ಪಿ.ಸಿ-1057 ರವರು ತಂದು ಹಾಜರುಪಡಿಸಿದ ಮೃತರ ಬಾಬ್ತು ರಕ್ತವನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 25/2019 ರಲ್ಲಿ ನಮೂದಿಸಿ ಘನ ನ್ಯಾಯಾಲಯದ ಆದೇಶದಂತೆ ಅನುಮತಿ ಪಡೆದು ಸದರಿ ವಸ್ತುವನ್ನು ಠಾಣಾ ಹೆಚ್.ಸಿ-42 ರವರ ಮುಖಾಂತರ FSL, ಬೆಂಗಳೂರಿಗೆ ಕಳುಹಿಸಿಕೊಟ್ಟಿರುತ್ತೇನೆ. ಸದರಿ ಪಿ.ಎಫ್ ಅಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪಿ.ಎಫ್ ಅನ್ನು **ನಿ.ಪಿ-29** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-29(ಎ) ಎಂದು ಗುರುತಿಸಲಾಯಿತು. ಸದರಿ ಮೃತ ಸುರೇಶ್ ಈತನ ಒಂದು ನೀಲಿ ಬಣ್ಣದ ಜರ್ಕೀನ್, ಒಂದು ರಕ್ತದ ಕಲೆಯಾಗಿರುವ ಗೆರೆಗಳುಳ್ಳ ಬಿಳಿ ಅಂಗಿ, ಮಾಸಲು ಬಣ್ಣದ ಹರಿದಿರುವ ರಕ್ತದ ಕಲೆಯಾಗಿರುವ ಒಂದು ಪ್ಯಾಂಟ್, ಒಂದು ಹರಿದಿರುವ ಕಾಕಿ ನಿಕ್ಕರ್ ಇವುಗಳನ್ನು ನೋಡಿ ಸಾಕ್ಷಿ ಗುರುತಿಸಿದ್ದು, ಸದರಿ ವಸ್ತುಗಳು ಈಗಾಗಲೇ ಮುದ್ದೆಮಾಲು-1 ರಿಂದ 4 ಎಂದು ಗುರುತಿಸಲಾಗಿರುತ್ತದೆ.

ದಿಃ 15.03.2019 ರಂದು ಈ ಪ್ರಕರಣದ ತನಿಖೆಯನ್ನು ಮುಂದುವರೆಸಿ ಸಾಕ್ಷಿದಾರರಾದ ಚಾಸಾ-3 ರಿಂದ 6 ಹಾಗೂ ಚಾಸಾ-26 ರವರುಗಳ ವಿಚಾರಣೆ ಮಾಡಿ ವಿವರವಾದ ಹೇಳಿಕೆಗಳನ್ನು ಪಡೆದಿರುತ್ತೇನೆ.

ದಿಃ 02.04.2019 ರಂದು ಈ ಪ್ರಕರಣದ ತನಿಖೆಯನ್ನು ಮುಂದುವರೆಸಿ ಆರೋಪಿ ಗೋವಿಂದರಾಜು ರವರ ಮೊಬೈಲ್ ಸಂಖ್ಯೇಃ 9880067101 ಹಾಗೂ ಮೃತ ಸುರೇಶ್ ರವರ ಮೊಬೈಲ್ ಸಂಖ್ಯೇಃ9632056545 ರ CAF ಮತ್ತು CDR ಅನ್ನು ಏರ್ಟೇಲ್ ನೋಡಲ್ ಅಧಿಕಾರಿಗಳಿಂದ ಪಡೆದುಕೊಂಡಿರುತ್ತೇನೆ. ಸದರಿ ಮನವಿ ಪತ್ರವನ್ನು ಸಲ್ಲಿಸಿದ್ದು, ಸದರಿ ಏರ್ಟೇಲ್ ನವರು 9880067101 ಗೆ ಸಂಬಂಧಿಸಿದಂತೆ CAF ಡಿಟೇಲ್ಸ್ ಹಾಗೂ ದಿಃ 14.02.2019 ರಿಂದ ದಿಃ 18.02.2019 ರವರೆಗೆ CDR ನ ಡಿಟೇಲ್ಸ್ ಅನ್ನು ನೀಡಿರುತ್ತಾರೆ ಹಾಗೂ 9632056545 ನಂಬರ್ ಗೆ ಸಂಬಂಧಿಸಿದಂತೆ CAF ಡಿಟೇಲ್ಸ್ ಹಾಗೂ ದಿಃ 14.02.2019 ರಿಂದ ದಿಃ 18.02.2019 ರವರೆಗೆ CDR ನ ಡಿಟೇಲ್ಸ್ ಅನ್ನು ನೀಡಿರುತ್ತಾರೆ ಹಾಗೂ ಸದರಿ ದಾಖಲಾತಿಗಳನ್ನು ನೀಡಿರುವ ಸಂಬಂಧ 65(ಬಿ) ಪ್ರಮಾಣ ಪತ್ರವನ್ನು ನೀಡಿರುತ್ತಾರೆ ಸದರಿ ದಾಖಲಾತಿಗಳನ್ನು **ನಿ.ಪಿ-30 ರಿಂದ ನಿ.ಪಿ-34** ಎಂದು ಗುರುತಿಸಲಾಯಿತು. ಸದರಿ ನಿ.ಪಿ-34 ರಲ್ಲಿ ಸಾಕ್ಷಿಯ ಸಹಿಯನ್ನು ನಿ.ಪಿ-34(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ನೀಡಿರುವ ಮನವಿ ಪತ್ರವನ್ನು ನೋಡಿ ಗುರುತಿಸಿದ್ದು, ಸದರಿ ಮನವಿ ಪತ್ರವನ್ನು **ನಿ.ಪಿ-35** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-35(ಎ) ಎಂದು ಗುರುತಿಸಲಾಯಿತು.

ದಿಃ 05.04.2019 ರಂದು ಕೃತ್ಯ ನಡೆದ ಸ್ಥಳವಾದ ಶ್ರೀರಾಮ ಮಂದಿರ, ತಂಡಗ ಗ್ರಾಮದ ದಾಖಲಾತಿಗಳ್ನು ನೀಡಲು ಪಂಚಯಾತಿ ಅಭಿವೃದ್ದಿ ಅಧಿಕಾರಿಯವರಿಗೆ ಮನವಿಯನ್ನು ಸಲ್ಲಿಸಿ ಖಾತ ಎಕ್ಸ್ ಟ್ರಾಕ್ಟ್ ಅನ್ನು

ಪಡೆದುಕೊಂಡಿರುತ್ತೇನೆ. ಸದರಿ ಖಾತ ಎಕ್ಸ್ ಟ್ರಾಕ್ಟ್ ಅಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಖಾತ ಎಕ್ಸ್ ಟ್ರಾಕ್ಟ್ ಈಗಾಗಲೇ ನಿ.ಪಿ–3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ–3(ಬಿ) ಎಂದು ಗುರುತಿಸಲಾಯಿತು. ಕೃತ್ಯ ನಡೆದ ಸಮಯದಲ್ಲಿ ಕೃತ್ಯ ನಡೆದ ಜಾಗದಲ್ಲಿ ವಿದ್ಯುತ್ ಸರಬರಾಜು ನೀಡಿರುವ ಬಗ್ಗೆ ಬೆಸ್ಕಾಂ ತುರುವೇಕೆರೆ ರವರಿಗೆ ಮನವಿಯನ್ನು ಸಲ್ಲಿಸಿ ವರದಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ಮನವಿ ಪತ್ರವನ್ನು ನೋಡುತ್ತಿದ್ದು, ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿರುತ್ತಾರೆ. ಸದರಿ ಮನವಿ ಪತ್ರವನ್ನು **ನಿ.ಪಿ–36** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ–36(ಎ) ಎಂದು ಗುರುತಿಸಲಾಯಿತು. ಸದರಿ ವರದಿಯಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ವರದಿಯು ಈಗಾಗಲೇ ನಿ.ಪಿ–6 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ–6(ಬಿ) ಎಂದು ಗುರುತಿಸಲಾಯಿತು.

ದಿಃ 01.05.2019 ರಂದು ತನಿಖೆಯನ್ನು ಮುಂದುವರೆಸಿ ಈ ಪ್ರಕರಣದಲ್ಲಿ ಈಗಾಗಲೇ RFSL ದಾವಣಗೆರೆ ಗೆ ಕಳುಹಿಸಿದ 9 ವಸ್ತುಗಳನ್ನು ಮತ್ತು ವರದಿಯನ್ನು ಠಾಣಾ ಸಿ.ಪಿ.ಸಿ–111 ರವರ ಮುಖಾಂತರ ಕಳುಹಿಸಿಕೊಟ್ಟಿದ್ದು, ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ FSL ವರದಿಯಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ FSL ವರದಿಯನ್ನು **ನಿ.ಪಿ–37** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ–37(ಎ) ಎಂದು ಗುರುತಿಸಲಾಯಿತು. ನಂತರ ಕೃತ್ಯಕ್ಕೆ ಬಳಸಿದ ರೀಫಿಸ್ ದೊಣ್ಣೆಯನ್ನು ಮರಣೋತ್ತರ ಪರೀಕ್ಷೆ ಮಾಡಿದ ವೈದ್ಯರ ಬಳಿ ಪಿ.ಸಿ–1057 ರ ಮುಖಾಂತರ ಕಳುಹಿಸಿಕೊಟ್ಟಿರುತ್ತೇನೆ. ಸದರಿ ರೀಫಿಸ್

ದೊಣ್ಣೆಯಿಂದ ವ್ಯಕ್ತಿಗೆ ಹೊಡೆದರೆ ವ್ಯಕ್ತಿಯು ಸಾಯುವ ಸಂಭವವಿರುತ್ತದೆ ಎಂದು ವೈದ್ಯರ ಅಭಿಪ್ರಾಯವನ್ನು ಕೇಳಿರುತ್ತೇನೆ. ದಿಃ 03.05.2019 ರಂದು ಸದರಿ ವೈದ್ಯರಾದ ರುದ್ರಮೂರ್ತಿಯವರು ನೀಡಿರುವ ಅಭಿಪ್ರಾಯದಲ್ಲಿ ಮೃತರಿಗೆ ಆಗಿರುವ 1 ರಿಂದ 8 ಹೊರಗಿನ ಮತ್ತು ಒಳಗಿನ ಗಾಯಗಳು ಈ ಮರದ ರೀಫಿಸ್ ದೊಣ್ಣೆಯಿಂದ ಹೊಡೆದರೆ ಆಗುವ ಸಾಧ್ಯತೆ ಇರುತ್ತದೆ ಎಂದು ಅಭಿಪ್ರಾಯವನ್ನು ನೀಡಿರುತ್ತಾರೆ. ಸದರಿ ವರದಿಯಲ್ಲಿ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ವರದಿಯನ್ನು ಈಗಾಗಲೇ ನಿ.ಪಿ–15 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ–15(ಬಿ) ಎಂದು ಗುರುತಿಸಲಾಯಿತು.

ದಿಃ 09.05.2019 ರಂದು ತನಿಖೆಯನ್ನು ಮುಂದುವರೆಸಿ ಈ ಪ್ರಕರಣದಲ್ಲಿ ಮೃತ ಸುರೇಶ್ ರವರಿಗೂ ಹಾಗೂ ಆರೋಪಿಯಾದ ಗೋವಿಂದರಾಜುರವರಿಗೆ ಈ ಹಿಂದೆ ದಿಃ 29.09.2013 ರಂದು ತಂಡಗ ಗ್ರಾಮದ ಬೇಕರಿ ಬಳಿ ಗಲಾಟೆಯಾಗಿದ್ದು, ಈ ಸಂದರ್ಭದಲ್ಲಿ ಮೃತ ಸುರೇಶ್ ರವರಿಗೆ ಗಾಯವಾಗಿದ್ದು, ಅವರು ದಿಃ 28.09.2013 ರಂದು ತುರುವೇಕೆರೆ ಠಾಣೆಗೆ ಹಾಜರಾಗಿ ದೂರು ನೀಡಿದ್ದು, ಸದರಿ ಪ್ರಕರಣ ಸಂಖ್ಯೆ 198/2013 ರಲ್ಲಿ ಕಲಂ 504,324 ಐ.ಪಿ.ಸಿ ರೀತ್ಯಾಪ್ರಕರಣ ದಾಖಲಾಗಿದ್ದು ದಿಃ 18.11.2013 ರಂದು ಠಾಣಾ ಅಧಿಕಾರಿಗಳು ಘನ ನ್ಯಾಯಾಲಯಕ್ಕೆ ಆರೋಪಿ ಗೋವಿಂದರಾಜು ರವರ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದು, ದಿಃ 31.10.2014 ರಂದು ಈ ಪ್ರಕರಣದಲ್ಲಿ ಆರೋಪಿತನು ಘನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ ತುರುವೇಕೆರೆ ನ್ಯಾಯಾಲಯದ ಮುಂದೆ ತಪ್ಪೊಪ್ಪಿಕೊಂಡಿದ್ದು, ಅದಕ್ಕೆ ಸಂಬಂಧಿಸಿದಂತೆ

ನ್ಯಾಯಾಲಯವು 500/- ದಂಡ ವಿಧಿಸಿರುತ್ತದೆ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಆರ್ಡರ್ ಶೀಟನ್ನು ಹಾಜರುಪಡಿಸಿದ್ದು, ಸದರಿ ಆರ್ಡರ್ ಶೀಟ್ ನ ದೃಢೀಕೃತ ನಕಲನ್ನು **ನಿ.ಪಿ-38** ಎಂದು ಗುರುತಿಸಲಾಯಿತು.

ಅದೇ ದಿನ ಸದರಿ ಪ್ರಕರಣದಲ್ಲಿ ಇಲ್ಲಿಯವರೆಗೂ ನಡೆದ ತನಿಖೆ ಹಾಗೂ ಸಾಕ್ಷಿದಾರರ ಹೇಳಿಕೆಳು ಹಾಗೂ FSL ವರದಿಗಳಿಂದ ಈ ಪ್ರಕರಣದಲ್ಲಿ ಆರೋಪಿತನಾದ ಗೋವಿಂದರಾಜ @ ಕತ್ತೆರಾಜು ರವರೇ ಕೃತ್ಯ ಎಸಗಿ ಸಾಕ್ಷಿಯನ್ನು ನಾಶ ಪಡಿಸಿದ್ದು ಸಾಭೀತಾಗಿದ್ದು, ಆರೋಪಿತರ ವಿರುದ್ಧ ಘನ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ತಯಾರಿಸಿ ಮೇಲಾಧಿಕಾರಿಗಳ ಪರಿಶೀಲನೆಯ ನಂತರ ಸಲ್ಲಿಸಿಕೊಂಡಿರುತ್ತೇನೆ ಹಾಗೂ ಈ ಪ್ರಕರಣದಲ್ಲಿ ತನಿಖಾ ಕಾಲದಲ್ಲಿ ತೆಗೆದ ಪೋಟೋಗಳ ಬಗ್ಗೆ ನನ್ನ ಬಾಬ್ತು 65(ಬಿ) ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪ್ರಮಾಣ ಪತ್ರವನ್ನು **ನಿ.ಪಿ-39** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-39(ಎ) ಎಂದು ಗುರುತಿಸಲಾಯಿತು. ಸದರಿ ಸಾಕ್ಷಿ ಎರಡು ಪೋಟೋಗಳನ್ನು ಹಾಗೂ ಸಿ.ಡಿಯನ್ನು ನೋಡಿ ಗುರುತಿಸಿದ್ದು, ಸದರಿ ಪೋಟೋಗಳಿಗೆ ಹಾಗೂ ಸಿ.ಡಿ ಗೆ ಸಂಬಂಧಿಸಿದಂತೆ ನಿ.ಪಿ-39 ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಸದರಿ ಪೋಟೋಗಳನ್ನು ಹಾಗೂ ಸಿ.ಡಿಯನ್ನು **ನಿ.ಪಿ-40 ರಿಂದ 42** ಎಂದು ಗುರುತಿಸಲಾಯಿತು. ಈ ಪ್ರಕರಣದಲ್ಲಿ ಬೆಂಗಳೂರು ಮಡಿವಾಳ ಪ್ರಯೋಗಾಲಯದಿಂದ ಮೃತನ ರಕ್ತದ ಪರೀಕ್ಷೆಯ ವರದಿ ಬರಲು ಬಾಕಿ ಇದ್ದು, ಅದಕ್ಕೆ ಸಂಬಂಧಿಸಿದಂತೆ ಅನುಮತಿಯನ್ನು ಕೋರಿ ಘನ ನ್ಯಾಯಾಲಯಕ್ಕೆ

ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿಕೊಂಡಿರುತ್ತೇನೆ. ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿತನನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

ನನ್ನ ಸಮಕ್ಷಮ ಚಾಸಾ–3 ರವರು ನಿ.ಪಿ–16 ರಂತೆ, ಚಾಸಾ–4 ರವರು ನಿ.ಪಿ–1 ರಂತೆ, ಚಾಸಾ–5 ರವರು ನಿ.ಪಿ–2 ರಂತೆ ನನ್ನ ಮುಂದೆ ಹೇಳಿಕೆ ನೀಡಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂ.ಡಿ ವಕೀಲರಿಂದಃ

ನಾನು ಸದರಿ ಪ್ರಕರಣದ ಕಡತವನ್ನು ಚಾಸಾ–27 ರವರಿಂದ ದಿಃ 20.02.2019 ರಂದು ಸ್ವೀಕರಿಸಿರುತ್ತೇನೆ. ನಾನು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪೂರ್ತಿ ಕಡತವನ್ನು ಸ್ವೀಕರಿಸಿರುತ್ತೇನೆ, ದಾಖಲಾತಿಗಳನ್ನು ಪರಿಶೀಲಿಸಿರುವುದಿಲ್ಲ. ಸದರಿ ನಾನು ಸ್ವೀಕರಿಸಿದ ದಾಖಲಾತಿಯಲ್ಲಿ ಯಾವ ಯಾವ ದಾಖಲಾತಿ ಎಂದು ಹೇಳಲು ಆಗುವುದಿಲ್ಲ. ನಾನು ಕಡತವನ್ನು ಸ್ವೀಕರಿಸಿದ ದಿನದಂದು ನನಗೆ ಆರೋಪಿತನ ಊರು ತಂಡಗ ಗ್ರಾಮ ಎಂದು ತಿಳಿದಿತ್ತು ಎಂದರೆ ಸರಿಯಲ್ಲ. ನಾನು ಕಡತವನ್ನು ಸ್ವೀಕರಿಸಿದ ಕಾಲಕ್ಕೆ ಆರೋಪಿತನು ತಂಡಗ ಗ್ರಾಮಕ್ಕೆ ಸೇರಿದವನು ಎಂದು ತೋರಿಸಲು ಯಾವುದೇ ದಾಖಲಾತಿ ಇರಲಿಲ್ಲ. ನಾನು ಆರೋಪಿತನ ಪತ್ತೆಗಾಗಿ ಸಿಬ್ಬಂದಿಯನ್ನು ದಿಃ 20.02.2019 ರಂದು ನೇಮಕ ಮಾಡಿರುತ್ತೇನೆ. ನಾನು ಆರೋಪಿತನ ಪತ್ತೆಗಾಗಿ ಸುಮಾರು 7–8 ಜನ ಸಿಬ್ಬಂದಿಯನ್ನು ನೇಮಕ ಮಾಡಿದ್ದೆನು. ದಿಃ 01.03.2019 ರಂದು ಬೆಳಗ್ಗೆ 7.00 ಗಂಟೆಗೆ ಆರೋಪಿತನನ್ನು ತಂಡಗ ಗ್ರಾಮದಲ್ಲಿ ದಸ್ತಗಿರಿ ಮಾಡಿರುತ್ತಾರೆ.

ಆರೋಪಿತರ ಪತ್ತೆಗಾಗಿ ಸಿಬ್ಬಂದಿಯನ್ನು ನೇಮಿಸಿರುವ ಸಂಬಂಧ ಯಾವುದೇ ಲಿಖಿತ ಆದೇಶವನ್ನು ನೀಡಿರುವುದಿಲ್ಲ. ಸದರಿ ಆರೋಪಿತನನ್ನು ದಸ್ತಗಿರಿ ಮಾಡಿದ ಕಾಲಕ್ಕೆ ನಾನು ತಂಡಗ ಗ್ರಾಮಕ್ಕೆ ಹೋಗಿರುವುದಿಲ್ಲ. ಸದರಿ ಆರೋಪಿತನನ್ನು ಸಿಬ್ಬಂದಿಯವರು ಠಾಣೆಗೆ ಕರೆದುಕೊಂಡು ಬಂದಾಗ 8.00 ಗಂಟೆಯ ಸಮಯವಾಗಿತ್ತು. ಸದರಿ ಆರೋಪಿತನನ್ನು ಠಾಣೆಗೆ ಹಾಜರುಪಡಿಸಿದಾಗ ಆತನು ಪ್ಯಾಂಟ್ ಶರ್ಟನ್ನು ಧರಿಸಿದ್ದನು. ನಾನು ಪಟ್ಟಣ ಪಂಚಾಯ್ತಿಯ ಮುಖ್ಯ ಅಧಿಕಾರಿಗಳಿಗೆ ಪಂಚರನ್ನು ಕಳುಹಿಸುವ ಸಂಬಂಧ ಮನವಿಯನ್ನು ಸಲ್ಲಿಸಿರುತ್ತೇನೆ. ಸದರಿ ಮನವಿಯ ದಾಖಲಾತಿಯನ್ನು ಚಾರ್ಜ್ ಶೀಟ್ ನೊಂದಿಗೆ ಲಗತ್ತಿಸಿರುವುದಿಲ್ಲ ಎಂದರೆ ಸರಿ. ಸದರಿ ಪಟ್ಟಣ ಪಂಚಾಯ್ತಿಗೆ ನಾನು ಪಂಚರನ್ನು ಕಳುಹಿಸುವಂತೆ ಯಾವುದೇ ಮನವಿಯನ್ನು ಸಲ್ಲಿಸಿಲ್ಲದಿದ್ದರೂ ಸಹಃ ಸಲ್ಲಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮನವಿ ಪತ್ರವನ್ನು ದಿಃ 01.03.2019 ರಂದು ಸಲ್ಲಿಸಿರುತ್ತೇನೆ. ಸದರಿ ಮನವಿ ಪತ್ರದಲ್ಲಿ ಕಾರಣವನ್ನು ನಮೂದು ಮಾಡಿರುತ್ತೇನೆ. ಸದರಿ ಪಟ್ಟಣ ಪಂಚಾಯ್ತಿಯವರು ಸಾಕ್ಷಿದಾರರನ್ನು ನಿಯೋಜಿಸಿದ ಬಗ್ಗೆ ಲಿಖಿತ ಆದೇಶವನ್ನು ನೀಡಿರುತ್ತಾರೆ. ನಾನು ಮತ್ತೇ ಸಾಕ್ಷಿದಾರರಿಗೆ ಯಾವುದೇ ಲಿಖಿತ ನೋಟಿಸ್ ಅನ್ನು ನೀಡಿರುವುದಿಲ್ಲ.

ನಾನು ದಿಃ 01.03.2019 ರಂದು ಠಾಣೆಯಿಂದ ಹೊರಟಾಗ 12.15 ಗಂಟೆಯಾಗಿರುತ್ತದೆ. ನಾನು ಸ್ಥಳಕ್ಕೆ ಹೋದಾಗ 12.45 ಗಂಟೆಯಾಗಿರುತ್ತದೆ. ಸದರಿ ತಂಡಗ ಗ್ರಾಮವು 800-1000 ಮನೆಗಳಿರುವ ಗ್ರಾಮ ಎಂದರೆ ಸರಿಯಲ್ಲ. ಸದರಿ ಗ್ರಾಮದಲ್ಲಿ ಗ್ರಾಮ ಪಂಚಾಯ್ತಿ, ಸ್ಕೂಲ್ ಹಾಗೂ ಬ್ಯಾಂಕ್ ಇರುತ್ತದೆ ಎಂದರೆ ಸರಿ. ಸದರಿ ಸಮಯದಲ್ಲಿ ಸುಮಾರು ಜನರು ಓಡಾಡುತ್ತಾರೆ ಎಂದರೆ ಸರಿ. ನಾನು

ಹಾಗೂ ಸಿಬ್ಬಂದಿಗಳು ಹಾಗೂ ಸಾಕ್ಷಿದಾರರು ಹಾಗೂ ಇತರರು ಸೇರಿ ಒಟ್ಟು 7 ಜನ ಹೋಗಿರುತ್ತೇವೆ. ಸಾಧಾರಣವಾಗಿ ಮುದ್ದೆಮಾಲು-7 ರೀಫಿಸ್ ಪಟ್ಟಿ ಹಳ್ಳಿಗಳಲ್ಲಿ ದೊರೆಯುತ್ತದೆ ಎಂದರೆ ಸರಿ. ಸದರಿ ಬಟ್ಟೆಗಳು ಆರೋಪಿದೆ ಎಂದು ತೋರಿಸಲು ಅದರ ಮೇಲೆ ಯಾವುದೇ ವಿಶೇಷ ಗುರುತುಗಳು ಇರುವುದಿಲ್ಲ. ಸದರಿ ಮುದ್ದೆಮಾಲು-8 ಶರ್ಟ್ ನ 10-15 ಕಡೆ ರಕ್ತದ ಕಲೆಗಳು ಆಗಿತ್ತು. ನಾನು ಹಾಜರುಪಡಿಸಿರುವ ಮುದ್ದೆಮಾಲು-8 ಬಟ್ಟೆಯ ಮೇಲೆ ಯಾವುದೇ ರಕ್ತದ ಕಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆರೋಪಿತನ ಮನೆಯ ಬಾಗಿಲು ಪೂರ್ವ ದಿಕ್ಕಿಗೆ ಇದೆ. ಸದರಿ ಆರೋಪಿತನ ಮನೆ ಯಾವ ತರಹದ ಮನೆ ಎಂದ ಮಹಜರ್ ಅಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ನಾನು ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ನಂತರ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿ.

ಸದರಿ ನಿ.ಪಿ-11 ಪಂಚನಾಮೆಯಲ್ಲಿ ಕೇವಲ ಸಹಿಗಳು ಮಾತ್ರ ಇದ್ದು, ಅದರಲ್ಲಿ ಸೀಲ್ ಅಳವಡಿಸಲಾಗಿಲ್ಲ ಎಂದರೆ ಸರಿ. ದಿಃ 01.03.2019 ರಂದು ಆರೋಪಿತನು ಯಾವುದೇ ಸ್ಥಳಗಳಿಗೆ ಕರೆದುಕೊಂಡು ಹೋಗಿರುವುದಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಹಾಗೂ ಬಟ್ಟೆಗಳನ್ನು ಹಾಜರುಪಡಿಸಿರುವುದಿಲ್ಲ ಹಾಗೂ ನಾನು ಪಂಚರ ಸಮಕ್ಷಮ ನಿ.ಪಿ-11 ರಂತೆ ಯಾವುದೇ ಪಂಚನಾಮೆಯನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿ.ಪಿ-11 ಪಂಚನಾಮೆಯನ್ನು ಠಾಣೆಯಲ್ಲಿ ಸೃಷ್ಟಿ ಮಾಡಿ ಸಾಕ್ಷಿದಾರರ ಸಹಿಯನ್ನು ಠಾಣೆಯಲ್ಲಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಸದರಿ ನಿ.ಪಿ–19 ನಿವೇದನೆಯನ್ನು ಮಂಜುನಾಥರವರು ನೀಡಿರುತ್ತಾರೆ. ಸದರಿ ನಿವೇದನೆಯನ್ನು ದಿಃ 01.03.2019 ರಂದು ನೀಡಿರುತ್ತಾರೆ. ಸದರಿ ನಿವೇದನೆಯಲ್ಲಿ ದಿನಾಂಕವು 01/003/2019 ಎಂದು ನಮೂದು ಇರುತ್ತದೆ ಎಂದರೆ ಸರಿ. ಸದರಿ ಪ್ರಕರಣಕ್ಕಾಗಿ ನಿ.ಪಿ–19 ದಾಖಲಾತಿಯನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಆರೋಪಿತನ ಊರು ತಂಡಗ ಗ್ರಾಮ ಎಂದು ನನಗೆ ಮೊದಲೇ ತಿಳಿದಿದ್ದರೂ ಸಹಃ ತಿಳಿದಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ನನ್ನ ತನಿಖಾ ಕಾಲದಲ್ಲಿ ಆರೋಪಿತನಿಗೆ ಸಂಬಂಧಿಸಿದಂತೆ ನಮ್ಮ ಠಾಣೆಯಲ್ಲಿ ಈಗಾಗಲೇ 2013 ರಲ್ಲಿ ದಾಖಲಾಗಿತ್ತು ಎಂದರೆ ಸರಿ. ಸದರಿ ಅಮಾನತ್ತು ಪಡಿಸಿಕೊಂಡ ವಸ್ತುಗಳ ಮೇಲೆ ಸಾಕ್ಷಿದಾರರ ಸಹಿಗಳನ್ನು ಪಡೆದುಕೊಂಡಿರುವುದಿಲ್ಲ. ಸದರಿ ಪ್ರಕರಣದಲ್ಲಿ ಚಾಸಾ–11 ಮತ್ತು 12 ರವರ ಎಷ್ಟು ಸಹಿಗಳನ್ನು ಪಡೆದುಕೊಂಡಿರುತ್ತೇನೆ ಎಂದು ನಿಖರವಾಗಿ ತಿಳಿದಿರುವುದಿಲ್ಲ. ಚಾಸಾ–1 ರಿಂದ 3 ರವರ ಹೇಳಿಕೆಗಳನ್ನು ದಿಃ 01.03.2019 ರಂದು ತಂಡಗ ಗ್ರಾಮದಲ್ಲಿ ಪಡೆದು ಕೊಂಡಿರುತ್ತೇನೆ. ಸದರಿ ಚಾಸಾ–1 ರಿಂದ 3 ರವರಿಗೆ ಯಾವುದೇ ಲಿಖಿತ ನೋಟಿಸ್ ಅನ್ನು ನೀಡಿರುವುದಿಲ್ಲ. ಸದರಿ ಮೃತ ಸುರೇಶ್ ರವರ ಮಗ ಗಜೇಂದ್ರ ಚಾಸಾ–2 ರವರು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. ದಿಃ 01.03.2019 ರಂದು ನಾನು ಚಾಸಾ–2 ರವರ ಹೇಳಿಕೆಯನ್ನು ಪಡೆದುಕೊಂಡ ಕಾಲಕ್ಕೆ ಆತ ತಂಡಗ ಗ್ರಾಮದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ–1 ರಿಂದ 3 ರವರ ಹೇಳಿಕೆಗಳ ಮೇಲೆ ಸಹಿ ಪಡೆದುಕೊಂಡಿರುವುದಿಲ್ಲ. ಸದರಿ ದಿಃ 01.03.2019 ರಂದು ನಾವು ನಮ್ಮೊಂದಿಗೆ ಮೊಬೈಲ್ ಕ್ಯಾಮೆರಾ ಮಾತ್ರ ತೆಗೆದುಕೊಂಡು ಹೋಗಿರುತ್ತೇವೆ, ಯಾವುದೇ ಬೇರೆ

ವಸ್ತುಗಳನ್ನು ತೆಗೆದುಕೊಂಡು ಹೋಗಿರುವುದಿಲ್ಲ. ನಾನು ಆರೋಪಿತನು ಬಳಸುತ್ತಿದ್ದ ಮೊಬೈಲ್ ಹಾಗೂ ಮೃತ ಸುರೇಶ್ ರವರ ಮೊಬೈಲನ್ನು ತನಿಖೆಗಾಗಿ ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನಾನು ಚಾಸ-1 ಮತ್ತು 2 ರವರ ಮೊಬೈಲ್ ಗಳನ್ನು ಸಹಃ ತನಿಖೆಗಾಗಿ ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಚಾಸಾ-26 ರವರು ತಮ್ಮ ಹೇಳಿಕೆಯಲ್ಲಿ ಮೃತ ಸುರೇಶ್ ರವರು ಹಂದಿ ಬೇಟೆಯಾಡಲು ಹೋಗುತ್ತೇನೆಂದು ಕರೆ ಮಾಡಿ ತಿಳಿಸಿರುವುದಾಗಿ ಹೇಳಿಕೆ ನೀಡಿದ್ದು, ಅದರ ಸಂಬಂಧ ಚಾಸಾ-26 ರವರ ಕಾಲ್ ಡಿಟೇಲ್ಸ್ ಹಾಗೂ ಮೊಬೈಲನ್ನು ಅಮಾನತ್ತು ಪಡಿಸಿಕೊಂಡು ಪರಿಶೀಲಿಸಿರುವುದಿಲ್ಲ.

ದಿಃ 02.03.2019 ರಂದು ನಾನು ಲೋಕೋಪಯೋಗಿ ಇಲಾಖೆಯವರಿಂದ ನಕ್ಷೆಯನ್ನು ತಯಾರಿಸಲು ಯಾವುದೇ ಮನವಿಯನ್ನು ತಯಾರಿಸಿರುವುದಿಲ್ಲ, ಸದರಿ ಮನವಿ ಪತ್ರವನ್ನು ಹಾಗೂ ನಕ್ಷೆಯನ್ನು ನಾನೇ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಿಃ 09.03.2019 ರಂದು ನಾನು ಮೃತ ಸುರೇಶ್ ಈತನಿಗೆ ಸಂಬಂಧಿಸಿದಂತೆ ಮುದ್ದೆಮಾಲು-1 ರಿಂದ 4 ಬಟ್ಟೆಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಅವುಗಳನ್ನು ಪ್ರಕರಣಕ್ಕಾಗಿ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಿಃ 15.03.2019 ರಂದು ಚಾಸಾ-3 ರಿಂದ 6, 26 ರವರ ಯಾವುದೇ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ, ಅವುಗಳನ್ನು ಪ್ರಕರಣಕ್ಕಾಗಿ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಸದರಿ ಮೃತ ಸುರೇಶ್ ರವರ ಸಾವಿಗೆ ಸಂಬಂಧಿಸಿದಂತೆ ಸಾವು ಎಷ್ಟು ಗಂಟೆಗೆ ಸಂಭವಿಸಿರುತ್ತದೆ ಎಂದು ನಿಖರವಾಗಿ ವರದಿಯನ್ನು ನೀಡಿರುವುದಿಲ್ಲ. ಸದರಿ ನಿ.ಪಿ-

6 ರಲ್ಲಿ ಬೆಸ್ಕಾಂ ರವರಿಗೆ ದಿಃ 16.02.2019 ರಂದು ರಾತ್ರಿ 8.30-9.30 ಗಂಟೆಯವರೆಗೂ ವಿದ್ಯುತ್ ಪೂರೈಕೆ ಚಾಲನೆಯಲ್ಲಿದ್ದ ಬಗ್ಗೆ ಮನವಿಯನ್ನು ಸಲ್ಲಿಸಿದ್ದು, ಸದರಿ ಸಮಯವನ್ನು ಆರೋಪಿಯ ಸ್ವಇಚ್ಛಾ ಹೇಳಿಕೆಯ ಆಧಾರದ ಮೇರೆಗೆ ನಮೂದು ಮಾಡಿರುತ್ತೇನೆ. ಸದರಿ ಘಟನ ಸ್ಥಳವು ಮೂರು ಕಡೆ ರಸ್ತೆ ಕೂಡುವ ಸರ್ಕಲ್ ಇರುತ್ತದೆ ಎಂದರೆ ಸರಿ. ಸದರಿ ರಸ್ತೆಗಳಲ್ಲಿ ವಾಹನದ ದಟ್ಟನೆ ಇರುತ್ತದೆ ಎಂದರೆ ಸರಿಯಲ್ಲ. ಆರೋಪಿತನ ಸ್ವಇಚ್ಛಾ ಹೇಳಿಕೆಯನ್ನು ನಿ.ಪಿ-27 ರಂತೆ ನೀಡಿರುವುದಿಲ್ಲ, ಅದನ್ನು ಪ್ರಕರಣಕ್ಕಾಗಿ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮುದ್ದೆಮಾಲು-7 ರೀಫಿಸ್ ಅಲ್ಲಿ ಒಂದು ಕಡೆ ರಕ್ತದ ಕಲೆಯಾಗಿರುತ್ತದೆ. ನಾನು ಸದರಿ ಪ್ರಕರಣದಲ್ಲಿ ಮುದ್ದೆಮಾಲು-1 ರಿಂದ 4 ಹಾಗೂ 7 ರಿಂದ 9 ವಸ್ತುಗಳನ್ನು ಯಾವುದೇ FSL ಗೆ ಕಳುಹಿಸಿರುವುದಿಲ್ಲ ಹಾಗೂ ದಾಖಲಾತಿಗಳನ್ನು ನಾನೇ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ತಮ್ಮ ಹೇಳಿಕೆಯಲ್ಲಿ ತನ್ನ ಗಂಡ ಮಗನ ಮದುವೆಗಾಗಿ 30,000/- ಹಣವನ್ನು ಮನೆಗೆ ತಂದಿಟ್ಟು ಹೋಗಿರುತ್ತಾರೆ ಎಂದು ಹೇಳಿಕೆ ನೀಡಿದ್ದು, ಅದರ ಸಂಬಂಧ ಮೃತನು ಎಲ್ಲಿಂದ ಹಣ ತಂದಿರುತ್ತಾನೆ ಎಂದು ನಾನು ವಿಚಾರಣೆ ಮಾಡಿರುವುದಿಲ್ಲ. ಚಾಸಾ-1 ರವರು ತಮ್ಮ ಹೇಳಿಕೆಯಲ್ಲಿ ಮೃತ ಸುರೇಶ್ ರವರು ರಾತ್ರಿ ಊಟ ಮಾಡುತ್ತಿದ್ದಾಗ ಕರೆ ಬಂದಿದ್ದು, ಆಗ ಅವರು ಊಟವನ್ನು ಅರ್ಧದಲ್ಲಿ ಬಿಟ್ಟು ಹೋಗಿರುತ್ತಾರೆ ಎಂದು ಹೇಳಿಕೆ ನೀಡಿದ್ದು, ಆ ಸಂಬಂಧ ಚಾಸಾ-1 ಹಾಗೂ ಮೃತ ಸುರೇಶ್ ಅವರ ಸಂಬಂಧದ ಬಗ್ಗೆ ನಾನು ವಿಚಾರಣೆ ಮಾಡಿರುತ್ತೇನೆ. ಸದರಿ ವಿಚಾರದ ಬಗ್ಗೆ ಚಾಸಾ-1 ರವರ ಹೇಳಿಕೆಯಲ್ಲಿ ನಮೂದು ಇಲ್ಲ ಎಂದರೆ ಸರಿ. ಸದರಿ ರಾಮ ಮಂದಿರದ ಬಳಿ ಇರುವ

ಮೆಟ್ಟಿಲುಗಳು ಒಂದೊಂದು ಮೆಟ್ಟಿಲು ಸುಮಾರು ಎರಡರಿಂದ ಮೂರು ಅಡಿ ಎತ್ತರ ಇರುತ್ತದೆ ಎಂದರೆ ಸರಿಯಲ್ಲ. ಸದರಿ ನಿ.ಪಿ–40 ಹಾಗೂ 41 ಪೋಟೋಗಳು ಹಾಗುೂ 42 ಸಿ.ಡಿ ಯ ಪೋಟೋಗಳನ್ನು ನಾನು ತೆಗೆದಿರುವುದಿಲ್ಲ ಎಂದರೆ ಸರಿ.

ಸದರಿ ಮೃತ ಸುರೇಶ್ ರವರ ಮಗ ಚಾಸಾ–2 ಗಜೇಂದ್ರ ರವರು ಬೆಂಗಳೂರಿನ ಏರ್ಟೇಲ್ ಕಂಪನಿಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ನಾನು ನಿ.ಪಿ–35 ರಂತೆ ಸಲ್ಲಿಸಿರುವ ಮನವಿ ಪತ್ರದಲ್ಲಿ 9880067101 ಮೊಬೈಲ್ ಸಂಖ್ಯೆ ಮೃತ ಸುರೇಶ್ ಗೆ ಸಂಬಂಧ ಪಟ್ಟಿದ್ದು ಇರುತ್ತದೆ. ಸದರಿ 9880067101 ಮೊಬೈಲ್ ಸಂಖ್ಯೆ ಸುರೇಶ್ ರವರು ಬಳಸುತ್ತಿದ್ದರು ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸದರಿ ನಿ.ಪಿ–30 ದಾಖಲಾತಿಯು ಸುನೀಲ್ ಕುಮಾರ್ ರವರ ಹೆಸರಿನಲ್ಲಿದ್ದು, ಅದರೊಂದಿಗೆ ಲಗತ್ತಿಸಿರುವ ಓಟರ್ ಐಡಿ ಸುನೀಲ ಕುಮಾರ್ ಎಂ.ಎಲ್ ಎಂದು ಇರುತ್ತದೆ ಎಂದರೆ ಸರಿ. ಸದರಿ 9880067101 ನಂಬರ್ ಮೃತ ಸುರೇಶ್ ರವರದೆಂದು ಚಾಸಾ–1,2 ಹಾಗೂ ಗ್ರಾಮಸ್ಥರು ತಿಳಿಸಿರುತ್ತಾರೆ. ಸದರಿ ನಂಬರ್ ಮೃತ ಸುರೇಶ್ ರವರು ಬಳಸುತ್ತಿದ್ದರು ಎಂದು ಚಾಸಾ–1,2 ಹಾಗೂ ಇತರರ ಹೇಳಿಕೆಯಲ್ಲಿ ನಮೂದು ಇಲ್ಲ ಎಂದರೆ ಸರಿ. ಸದರಿ 9880067101 ನಂಬರ್ ಏರ್ಟೇಲ್ ಕಂಪನಿಗೆ ಸೇರಿದ ನಂಬರ್ ಎಂದರೆ ಸರಿ. ಮೊಬೈಲ್ ಸಂಖ್ಯೇ 9632056545 ನಂಬರ್ ಆರೋಪಿ ಗೋವಿಂದರಾಜು ಈತನಿಗೆ ಸಂಬಂಧ ಪಟ್ಟ ನಂಬರ್ ಇರುತ್ತದೆ. ಸದರಿ ನಂಬರ್ ಆರೋಪಿತನದ್ದೆಂದು ಆರೋಪಿತನೆ ನನಗೆ ತಿಳಿಸಿರುತ್ತಾನೆ. ಸದರಿ ನಂಬರ್ ಸಹಃ ಏರ್ಟೇಲ್ ಕಂಪನಿಗೆ ಸೇರಿದ ನಂಬರ್ ಎಂದರೆ ಸರಿ. ಸದರಿ ಹಾಜರುಪಡಿಸಿರುವ ನಿ.ಪಿ–30 ರಿಂದ 33 ದಾಖಲಾತಿಗಳಿಗೆ ಸಂಬಂಧಿಸಿದಂತೆ ಯಾರು ನೀಡಿರುತ್ತಾರೆ

ಅವರ ಹಸ್ತಾಕ್ಷರ ಅಥವಾ ದೃಢೀಕರಿಸಿದ ಬಗ್ಗೆ ಯಾವುದೇ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಚಾಸಾ–2 ರವರು ಏರ್ಟೆಲ್ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಕಾರಣ ನಾನು ನಿ.ಪಿ–30 ರಿಂದ 34 ದಾಖಲಾತಿಗಳನ್ನು ಸದರಿ ಪ್ರಕರಣಕ್ಕಾಗಿ ಚಾಸಾ–2 ರವರೊಂದಿಗೆ ಸೇರಿ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಸದರಿ ಆರೋಪಿತನಿಗೂ ಹಾಗೂ ಮೃತನಿಗೆ ಸಂಬಂಧಿಸಿದಂತೆ 2013 ರಲ್ಲಿ ಪ್ರಕರಣ ದಾಖಲಾಗಿದ್ದ ಕಾರಣ ಸದರಿ ಆರೋಪಿತನನ್ನು ಈ ಪ್ರಕರಣದಲ್ಲಿ ಆರೋಪಿಯನ್ನಾಗಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಆರೋಪಿತನು ಘಟನಾ ಸ್ಥಳದಲ್ಲಿ ಹಾಜರಿರಲಿಲ್ಲ ಹಾಗೂ ಆತನಿಗೂ ಈ ಘಟನೆಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸುರೇಶ್ ಈತನಿಗೆ ವಿಪರೀತ ಮಧ್ಯಪಾನ ಮಾಡುವ ಅಭ್ಯಾಸವಿದ್ದು, ಆತನು ಮಧ್ಯಪಾನ ಮಾಡಿ ಮೆಟ್ಟಿಲು ಹತ್ತಲು ಹೋಗಿ ಜಾರಿ ಬಿದ್ದು ಮೃತ ಪಟ್ಟಿರುತ್ತಾನೆ ಎಂದರೆ ಸರಿಯಲ್ಲ.

ಸದರಿ ಆರೋಪಿತನಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹಃ ಹಾಗೂ ಯಾವುದೇ ಸಾಕ್ಷ್ಯದಾರಗಳು ಇಲ್ಲದಿದ್ದರೂ ಸಹಃ ಆರೋಪಿತ ವಿರುದ್ಧ ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಚಾಸಾ–1 ಮತ್ತು 2 ರವರೊಂದಿಗೆ ಸೇರಿ ಆರೋಪಿತ ವಿರುದ್ಧ ಸುಳ್ಳು ದಾಖಲಾತಿಯನ್ನು ತಯಾರಿಸಿ ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

(ಮರುವಿಚಾರಣೆ ಇಲ್ಲವೆಂದಿದ್ದಾರೆ).

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.

(ಹೇಮಂತ್ ಕುಮಾರ್ ಸಿ.ಆರ್)
5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತಿಪಟೂರು